# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಎಸ್‌ಜಿಎಸ್‌ವೈ ವಿಶೇಷ ಯೋಜನೆಯಡಿ ಗ್ರಾಮೀಣ ಪ್ರದೇಶದ ಬಡ ಯುವಜನತೆಗೆ ಕೌಶಲ್ಯಾಭಿವೃದ್ಧಿ ತರಬೇತಿ ಹಾಗೂ ಉದ್ಯೋಗಾವಕಾಶ ಕಲ್ಪಿಸುವ ವಿಶೇಷ ಯೋಜನೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ ಶ್ರೀ ಶಕ್ತಿ ಅಸೋಷಿಯೇಷನ್, ಗುತ್ತೂರು ಕಾಲೋನಿ, ಹರಿಹರ ಇವರಿಗೆ ರಾಜ್ಯದ ಪಾಲಿನ ಮೊದಲನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡುವ ಸಲುವಾಗಿ ಅನುದಾನವನ್ನು ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಗೆ ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:**
1. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: ಜೆ-17022/01/2011 ಎಸ್‌ಜಿಎಸ್‌ವೈ-11 (ಎಸ್‌ಪಿ) ದಿನಾಂಕ: 30-03-2013.
2. ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: ಜೆ 17022/01/2011 ಎಸ್‌ಜಿಎಸ್‌ವೈ-11 ಎಸ್‌ಪಿ (ಸ್ಕಿಲ್ಸ್ ಡಿವಿಷನ್) ದಿನಾಂಕ: 14-07-2014.
3. ಎನ್‌ಐಆರ್‌ಡಿ, ಹೈದರಾಬಾದ್ ಇವರ ಪತ್ರ ಸಂಖ್ಯೆ: ಎನ್‌ಐಆರ್‌ಡಿ/ಎಎಸ್‌ಡಿಪಿ/ಶ್ರೀಶಕ್ತಿ/ಕೆಎ/2014-15ದಿನಾಂಕ: 8-09-2014.
4. ಆರ್ಥಿಕ ಇಲಾಖೆಯ ಸಹಮತಿ ಸಂಖ್ಯೆ:ಆಇ 292 ವೆಚ್ಚ-6/2014 ದಿನಾಂಕ: 05-01-2015.

***ಪ್ರಸ್ತಾವನೆ:***

ಗ್ರಾಮೀಣ ಬಡ ಯುವಜನತೆಗೆ "ಕೌಶಲ್ಯಾಭಿವೃದ್ಧಿ ತರಬೇತಿ ಹಾಗೂ ಉದ್ಯೋಗಾವಕಾಶ ಕಲ್ಪಿಸುವ ವಿಶೇಷ ಯೋಜನೆ" ಯು ಈ ಹಿಂದೆ ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ (ಎಸ್‌ಜಿಎಸ್‌ವೈ) ಯಡಿ ಅನುಷ್ಠಾನಗೊಳಿಸಲಾಗುತ್ತಿತ್ತು. ಎಸ್‌ಜಿಎಸ್‌ವೈಯನ್ನು ಕೇಂದ್ರ ಸರ್ಕಾರ ಪುನರ್‌ರಚಿಸಿ ಆಜೀವಿಕ ಯೋಜನೆಯಾಗಿ ಜಾರಿಗೊಳಿಸಿದೆ.

ಸದರಿ ಯೋಜನೆಯನ್ನು ರಾಜ್ಯದಲ್ಲಿ "ಸಂಜೀವಿನಿ" ಹೆಸರಿನಲ್ಲಿ ಕೆಎಸ್‌ಆರ್‌ಎಲ್‌ಪಿಎಸ್ ಸೊಸೈಟಿ ಮೂಲಕ ಜಾರಿಗೊಳಿಸಲಾಗುತ್ತಿದೆ. ಇದು ಸಂಜೀವಿನಿ ಯೋಜನೆಯ ಒಂದು ಉಪ ಯೋಜನೆಯಾಗಿದೆ. ಯೋಜನೆಯ ಮಾರ್ಗಸೂಚಿಯಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 75:25ರ ಅನುಪಾತದಲ್ಲಿ ಅನುದಾನವನ್ನು ಭರಿಸುವುದು. ವಿವಿಧ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲು ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ನವದೆಹಲಿ ಇವರು ಅನೇಕ ಯೋಜನಾ ಅನುಷ್ಠಾನ ಸಂಸ್ಥೆಗಳನ್ನು ಆಯ್ಕೆ ಮಾಡಿ ಆಯಾ ಸಂಸ್ಥೆಗಳ ಮೂಲಕ ವಿವಿಧ ಕ್ಷೇತ್ರಗಳಲ್ಲಿ ವೃತ್ತಿ ಆಧಾರಿತ ತರಬೇತಿ ನೀಡುವ ಸಲುವಾಗಿ ಕೌಶಲ್ಯಾಭಿವೃದ್ಧಿ ತರಬೇತಿ ಮತ್ತು ಉದ್ಯೋಗಾವಕಾಶ ಕಲ್ಪಿಸುವ ವಿಶೇಷ ಯೋಜನೆಯನ್ನು ದಾವಣಗೆರೆ ಜಿಲ್ಲೆಯಲ್ಲಿ ಅನುಷ್ಠಾಗೊಳಿಸಲು ಶ್ರೀ ಶಕ್ತಿ ಅಸೋಷಿಯೇಷನ್, ಗುತ್ತೂರು ಕಾಲೋನಿ, ಹರಿಹರ ಸಂಸ್ಥೆಗೆ ಓದಲಾಗಿದೆ (1)ರಲ್ಲಿ ಕೇಂದ್ರವು ತನ್ನ ಪಾಲಿನ ಒಂದನೇ ಕಂತಿನ ಅನುದಾನ ರೂ.71,55,000/- (ರೂ.ಎಪ್ಪತ್ತೊಂದು ಲಕ್ಷದ ಐವತ್ತೈದು ಸಾವಿರ ರೂ.ಮಾತ್ರ) ಬಿಡುಗಡೆ ಮಾಡಿದೆ.

ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಸೆಪ್ಟಂಬರ್ 2013ರಲ್ಲಿ ಪರಿಷ್ಕೃತ ಮಾರ್ಗಸೂಚಿಯನ್ನು ಹೊರಡಿಸಿದ್ದು, ಇದರನ್ವಯ ಯೋಜನಾ ಪ್ರಸ್ತಾವನೆಯನ್ನು ಸಲ್ಲಿಸಲು ಸಂಸ್ಥೆಗೆ ತಿಳಿಸಲಾಗಿತ್ತು. ಸದರಿ ಸಂಸ್ಥೆಯು ಪರಿಷ್ಕೃತ ಮಾರ್ಗಸೂಚಿಯನ್ವಯ ಪ್ರಸ್ತಾವನೆಯನ್ನು ಸಲ್ಲಿಸಿತ್ತು. ಈ ಕಾರಣಗಳಿಂದಾಗಿ ಯೋಜನೆಯನ್ನು ಅನುಷ್ಠಾನ ಗೊಳಿಸಲು ವಿಳಂಬವಾಗಿದೆ. ಶ್ರೀ ಶಕ್ತಿ ಅಸೋಸಿಯೇಷನ್ ಸಂಸ್ಥೆ ಸೆಪ್ಟೆಂಬರ್ 2013 ರ ಕಂಡಿಕೆ 4.9 ರನ್ವಯ 2012 ರ ಮಾರ್ಗಸೂಚಿಯಂತೆ ಪ್ರಸ್ತಾವನೆಯನ್ನು ಅನುಷ್ಠಾನಗೊಳಿಸಲು ಅನುಮತಿ ಕೋರಿತ್ತು. ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಓದಲಾಗಿದೆ (2) ರ ಪತ್ರ ದಿನಾಂಕ 14-07-2014 ರಲ್ಲಿ ಮಾರ್ಗಸೂಚಿ ಕಂಡಿಕೆ 4.9 ರನ್ವಯ ಸದರಿ ಸಂಸ್ಥೆಗೆ ಯಾವುದೇ ಹೆಚ್ಚಿನ ಅನುದಾನವನ್ನು ಮಂಜೂರು ಮಾಡುವುದಿಲ್ಲವೆಂದು ಮತ್ತು ನಿಗದಿತ ದಿನಾಂಕದೊಳಗೆ ಯೋಜನೆಯನ್ನು ಮುಕ್ತಾಯಗೊಳಿಸಬೇಕೆಂಬ ಷರತ್ತಿಗೆ ಒಳಪಟ್ಟು ಹಿಂದಿನ ಪ್ರಸ್ತಾವನೆಯಂತೆಯೇ ಮಂಜೂರಾತಿ ನೀಡಿದೆ. ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಯೋಜನೆಯ ಅನುಷ್ಠಾನಕ್ಕೆ ಎನ್‌ಐಆರ್‌ಡಿ, ಹೈದರಾಬಾದ್ ಸಂಸ್ಥೆಯನ್ನು ತಾಂತ್ರಿಕ ಬೆಂಬಲ ಸಂಸ್ಥೆಯಾಗಿ ಗುರುತಿಸಿ ಅನುದಾನವನ್ನು ಎನ್‌ಐಆರ್‌ಡಿ, ಹೈದರಾಬಾದ್‌ಗೆ ಬಿಡುಗಡೆ

ಮಾಡಿದೆ. ಎನ್ಐಆರ್‌ಡಿ, ಹೈದರಾಬಾದ್ ಓದಲಾಗಿದೆ (3) ರ ಪತ್ರದಲ್ಲಿ 2013ರ ಮಾರ್ಗಸೂಚಿ ಕಂಡಿಕೆ 4.9 ರನ್ವಯ ಶ್ರೀ ಶಕ್ತಿ ಅಸೋಸಿಯೇಷನ್ ಸಂಸ್ಥೆಗೆ ಕೌಶಲ್ಯಾಭಿವೃದ್ಧಿ ಮತ್ತು ಉದ್ಯೋಗಾವಕಾಶ 2012ರ ಮಾರ್ಗಸೂಚಿಯನ್ವಯ ಯಾವುದೇ ಹೆಚ್ಚಿನ ಅನುದಾನ ಮಂಜೂರು ಮಾಡುವುದಿಲ್ಲವೆಂದು ತಿಳಿಸಿ, ತರಬೇತಿಯನ್ನು ಪ್ರಾರಂಭಿಸಲು ಶಿಫಾರಸ್ಸು ಮಾಡಿದೆ.

ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಗೆ 2014–15 ನೇ ಆರ್ಥಿಕ ಸಾಲಿನ ಲೆಕ್ಕ ಶೀರ್ಷಿಕೆ 2501–00–101–0–05 (2501–01–198–6–01) ರಡಿ ರೂ.150 ಕೋಟಿ ಅನುದಾನ ಒದಗಿಸಿದೆ. ಈ ಅನುದಾನದಲ್ಲಿ ಸದರಿ ಮೊತ್ತವನ್ನು ಭರಿಸಲು ಆರ್ಥಿಕ ಇಲಾಖೆ ಸಹಮತಿಗಾಗಿ ಕಡತವನ್ನು ಸಲ್ಲಿಸಲಾಗಿದ್ದು, ಓದಲಾಗಿದೆ (4) ರನ್ವಯ ಆರ್ಥಿಕ ಇಲಾಖೆಯು ಅನುದಾನದ ಬಿಡುಗಡೆಗೆ ಸಹಮತಿಸಿದೆ. ಕೇಂದ್ರ ಬಿಡುಗಡೆ ಮಾಡಿದ ಅನುದಾನ ರೂ.71,55,000/–ಗಳಿಗೆ ಅನುಗುಣವಾಗಿ ರಾಜ್ಯದ ಪಾಲಿನ ಮೊದಲನೇ ಕಂತಿನ ಅನುದಾನ ರೂ.23,85,000/–ಗಳನ್ನು ಶ್ರೀ ಶಕ್ತಿ ಅಸೋಷಿಯೇಷನ್, ಗುತ್ತೂರು ಕಾಲೋನಿ, ಹರಿಹರ ಇವರಿಗೆ ಬಿಡುಗಡೆ ಮಾಡುವ ಸಲುವಾಗಿ ಅಭಿಯಾನ ನಿರ್ದೇಶಕರು–ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಗೆ ಬಿಡುಗಡೆ ಮಾಡಬೇಕಾಗಿದೆ. ಆದುದರಿಂದ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಕೆಎಸ್‌ಆರ್‌ಎಲ್‌ಪಿಎಸ್ 41 ಎಸ್‌ಪಿ 2014 (ಎಡಿ–2), ಬೆಂಗಳೂರು**
**ದಿನಾಂಕ: 29–01–2015**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, "ಕೌಶಲ್ಯಾಭಿವೃದ್ಧಿ ತರಬೇತಿ ಹಾಗೂ ಉದ್ಯೋಗಾವಕಾಶ ಕಲ್ಪಿಸುವ ವಿಶೇಷ ಯೋಜನೆ" ಯಡಿ ಶ್ರೀ ಶಕ್ತಿ ಅಸೋಷಿಯೇಷನ್ ಸಂಸ್ಥೆ, ಗುತ್ತೂರು ಕಾಲೋನಿ, ಹರಿಹರ ಇವರಿಗೆ ರಾಜ್ಯದ ಪಾಲಿನ ಒಂದನೇ ಕಂತಿನ ಅನುದಾನ ಒಟ್ಟು ರೂ.**23,85,000**/–ಗಳನ್ನು (ರೂ.ಇಪ್ಪತ್ತಮೂರು ಲಕ್ಷದ ಎಂಬತ್ತೈದು ಸಾವಿರ ರೂ.ಮಾತ್ರ) **ಬಿಡುಗಡೆ ಮಾಡುವ ಸಲುವಾಗಿ** ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಅಭಿಯಾನ ನಿರ್ದೇಶಕರು ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

**ಷರತ್ತುಗಳು:**

- **2014–15ನೇ ಸಾಲಿನ ರಾಜ್ಯದ ಆಯವ್ಯಯದಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಕಾರ್ಯಾಚರಣೆ (ಎನ್‌ಆರ್‌ಎಲ್‌ಎಂ) ಗೆ ಒದಗಿಸಿದ ಲೆಕ್ಕ ಶೀರ್ಷಿಕೆ 2501–00–101–0–05 (2501–01–198–6–01) ರಡಿ ಮೇಲ್ಕಂಡ ರಾಜ್ಯದ ಪಾಲಿನ ಅನುದಾನವನ್ನು ಭರಿಸುವುದು.**
- ಅಪರ ಅಭಿಯಾನ ನಿರ್ದೇಶಕರು, ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು ಇವರು ರುಜು ಮಾಡಿದ ಸ್ವೀಕೃತ ರಸೀದಿ (payees receipt) ನ್ನು ಸರ್ಕಾರಕ್ಕೆ ಸಲ್ಲಿಸುವುದು. ನಂತರ ಸ್ವೀಕೃತ ರಸೀದಿ (payees receipt)ಗೆ ನಿರ್ದೇಶಕರು (ಇ_ಆಡಳಿತ) ಮತ್ತು (ಸ್ವಉಕಾ) ಹಾಗೂ ಪ.ನಿ ಸರ್ಕಾರದ ಉಪ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರು ಮೇಲು ರುಜು ಮಾಡುವುದು. ಉಪ ನಿರ್ದೇಶಕರು (ಸ್ವಉಕಾ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬೆಂಗಳೂರು, ಇವರು ಅನುದಾನವನ್ನು ಅಭಿಯಾನ ನಿರ್ದೇಶಕರು, ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು ಇವರ ಹೆಸರಿನಲ್ಲಿ ಸೆಳೆದು ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಗೆ ನೀಡುವುದು.
- ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯು, ಬಿಡುಗಡೆ ಮಾಡಿದ ರಾಜ್ಯದ ಪಾಲಿನ ಅನುದಾನವನ್ನು ಈಗಾಗಲೇ ಸಂಸ್ಥೆಯ ಹೆಸರಿನಲ್ಲಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮೆ ಮಾಡಿ, ಯೋಜನಾ ಅನುಷ್ಠಾನ ಸಂಸ್ಥೆಯಾದ ಶ್ರೀ ಶಕ್ತಿ ಅಸೋಷಿಯೇಷನ್ ಸಂಸ್ಥೆ, ಗುತ್ತೂರು ಕಾಲೋನಿ, ಹರಿಹರ ಇವರಿಗೆ ನಿಯಮಾನುಸಾರ ಬಿಡುಗಡೆ ಮಾಡಿ ಲೆಕ್ಕಪತ್ರ ನಿರ್ವಹಿಸತಕ್ಕದ್ದು.
- ಮೇಲ್ಕಂಡ ಅನುದಾನವನ್ನು ಕೌಶಲ್ಯಾಭಿವೃದ್ಧಿ ತರಬೇತಿ ಹಾಗೂ ಉದ್ಯೋಗಾವಕಾಶ ಕಲ್ಪಿಸುವ ವಿಶೇಷ ಯೋಜನೆಯನ್ನು ಅನುಷ್ಠಾನಗೊಳಿಸಲು ಮಾತ್ರ ಭರಿಸತಕ್ಕದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 292 ವೆಚ್ಚ-6/2014 ದಿನಾಂಕ 05-01-2015 ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ

(ಮಹದೇವ)
ನಿರ್ದೇಶಕರು (ಇ-ಆಡಳಿತ) ಮತ್ತು (ಸ್ವಉಕಾ) ಹಾಗೂ
ಪ.ನಿ. ಸರ್ಕಾರದ ಉಪ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ...

ಗೆ: ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಇವರಿಗೆ ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಲು ಕೋರಲಾಗಿದೆ. (ಎರಡು ಪ್ರತಿಗಳು.

<u>ಪ್ರತಿಯನ್ನು:</u>

1) ಪ್ರಧಾನ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್, ನಂ.55, ಅಭಯ ಕಾಂಪ್ಲೆಕ್ಸ್, 4ನೇ ಮಹಡಿ, ರಿಸಲ್ದಾರ್ ರೋಡ್, ಶೇಷಾದ್ರಿಪುರಂ, ಬೆಂಗಳೂರು.
3) ಅಪರ ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್, ನಂ.55, ಅಭಯ ಕಾಂಪ್ಲೆಕ್ಸ್, 4ನೇ ಮಹಡಿ, ರಿಸಲ್ದಾರ್ ರೋಡ್, ಶೇಷಾದ್ರಿಪುರಂ, ಬೆಂಗಳೂರು.
4) ನಿರ್ದೇಶಕರು, ಖಜಾನೆ ಇಲಾಖೆ, ಪೋಡಿಯಂ ಬ್ಲಾಕ್, ವಿ.ವಿ. ಟವರ್, ಬೆಂಗಳೂರು-560001.
5) ಉಪ ನಿರ್ದೇಶಕರು, ಖಜಾನೆ ನೆಟ್‌ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, ನಂ.49, 2ನೇ ಮಹಡಿ, ಖನಿಜ ಭವನ (ಸರ್ಕಾರಿ ಬ್ಲಾಕ್) ರೇಸ್ ಕೋರ್ಸ್ ರಸ್ತೆ ಬೆಂಗಳೂರು.
6) ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
7) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು.
8) ಸರ್ಕಾರದ ಕಾರ್ಯದರ್ಶಿಗಳು (ವೆಚ್ಚ), ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು ಇವರ ಆಪ್ತ ಕಾರ್ಯದರ್ಶಿಗಳಿಗೆ.
9) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು / ಸರ್ಕಾರದ ಕಾರ್ಯದರ್ಶಿಗಳು, (ಪಂ.ರಾಜ್), ಗ್ರಾಅಪಂರಾ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳಿಗೆ.
10) ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪಂರಾ ಇಲಾಖೆ ಇವರ ಆಪ್ತ ಸಹಾಯಕರಿಗೆ.
11) ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಅಪಂರಾ ಇಲಾಖೆ, ಬೆಂಗಳೂರು.
12) ಶಾಖಾಧಿಕಾರಿ, ಪತ್ರ ಸ್ವೀಕಾರ ಮತ್ತು ರವಾನೆ ಶಾಖೆ, ಗ್ರಾಅಪಂರಾ ಇಲಾಖೆ.
13) ಗಣಕ ಕೋಶ, ಗ್ರಾಅಪಂರಾ ಇಲಾಖೆ, ಮುಂದಿನ ಕ್ರಮಕ್ಕಾಗಿ
14) ಹೆಚ್ಚಿನ ಪ್ರತಿ.

***